| | | |
|---|---|---|
| 26. | ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿ. | 0.16 ಳ ” |
| ನಷ್ಟ ಅನುಭವಿಸುತ್ತಿರುವ ಉದ್ಯಮಗಳ ಒಟ್ಟು ಮೊತ್ತ | | 4945.99 |

## ಸ್ವಾತಂತ್ಯ ಯೋಧರ ಸಂಖ್ಯೆ

**250 (319)** ಶ್ರೀ ಜಿ. ರಾಜುಗೌಡ, (ಹನೂರು):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ರಾಜ್ಯದಲ್ಲಿ ಎಷ್ಟು ಜನ ಸ್ವಾತಂತ್ಯ ಯೋಧರಿದ್ದಾರೆ;

2. ಅವರಿಗಾಗಿ ಸರ್ಕಾರವು ಒಂದು ತಿಂಗಳಿಗೆ ಎಷ್ಟು ವೆಚ್ಚ ಮಾಡುತ್ತಿರುವುದು;

3. ಮೊತ್ತ ಪ್ರತಿ ತಿಂಗಳು ಕೊಡುವ ಬದಲು ಒಂದೇ ಸಾರಿ ನಿರ್ದಿಷ್ಟ ಮೊತ್ತವನ್ನು ಕೊಟ್ಟು ಆ ಹಣದಿಂದ ಬೇರೆ ಜೀವನೋಪಾಯ ಮಾಡಿಕೊಡುವುದು ಸೂಕ್ತವಲ್ಲವೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

1. 17,918

2. ರೂ. 1,14,33,147-00

3. ಈ ರೀತಿಯ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

## ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಮಲ್ಪೆ ಬೀಚ್‌ನಲ್ಲಿ ಹೋಟೆಲ್

**218 (816)** ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):-

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಮಲ್ಪೆ ಬೀಚ್‌ನಲ್ಲಿ ಹೋಟೆಲ್ ಕಟ್ಟುವ ಕಾರ್ಯವನ್ನು ಕೈಗೊಂಡಿರುವರೆ;

ಆ) ಹಾಗಿದ್ದಲ್ಲಿ, ನಿರ್ಮಾಣ ಕಾರ್ಯವನ್ನು ಯಾವಾಗ ಕೈಗೊಳ್ಳಲಾಯಿತು;

ಇ) ನಿರ್ಮಾಣ ಕಾರ್ಯದ ಪ್ರಾರಂಭಿಕದಲ್ಲಿನ ಅಂದಾಜು ವೆಚ್ಚ;

ಈ) ಖರ್ಚು ಮಾಡಲಾಗಿರುವ ಮೊಬಲಗು;

ಉ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್ ಕಟ್ಟಡವು ಪೂರ್ಣಗೊಂಡಿದೆಯೇ;

ಊ) ಇಲ್ಲದಿದ್ದಲ್ಲಿ ಕಾರಣಗಳೇನು;

ಋ) ಗುತ್ತಿಗೆದಾರರಿಗೆ ಇದುವರೆಗೂ ಪಾವತಿಸಲಾದ ಹಣವೆಷ್ಟು;

ಎ) ಸದರಿ ಕಟ್ಟಡವನ್ನು ಪೂರ್ಣಗೊಳಿಸಲು ಬೇಕಾಗುವ ಮೊಬಲಗು ಎಷ್ಟು;

ಏ) ಕಟ್ಟಡದ ಕಳಪೆ ಕೆಲಸ ಕುರಿತು ಸಾರ್ವಜನಿಕ ಉದ್ದಿಮೆಗಳು ಏನಾದರೂ ವರದಿ ನೀಡಿದೆಯೆ;

ಐ) ವಿಳಂಬಕ್ಕೆ ಜವಾಬ್ದಾರರಾದ ಎಲ್ಲರ ಮೇಲೂ ಕ್ರಮ ಕೈಗೊಳ್ಳಲು ಸರ್ಕಾರವು ಯೋಜಿಸಿದೆಯೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಮಂತ್ರಿಗಳು):–

ಅ) ಹೌದು

ಆ) 1979 ರಲ್ಲಿ

ಇ) ರೂ. 11,89,548–15

ಈ) ರೂ. 1,06,27,220–31

ಉ) ಪೂರ್ಣಗೊಂಡಿಲ್ಲ.

ಊ) ಗುತ್ತಿಗೆದಾರರಿಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತಕ್ಕೂ ವಿವಾದ ಏರ್ಪಟ್ಟಿದ್ದುದರಿಂದ ಹಾಗೂ ಹಣದ ಅಭಾವದಿಂದ ನಿರ್ಮಾಣ ಕಾರ್ಯವು ಸ್ಥಗಿತಗೊಂಡಿತು.

ಋ) ರೂ. 1,06,27,220–31

ಎ) ರೂ. 50.00 ಲಕ್ಷ

ಏ) ಹೌದು

ಐ) ಹೌದು

## ಕೋಲಾರ ಜಿಲ್ಲೆಯಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ

**217 (817)** ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಅನಧಿಕೃತವಾಗಿ ಸಾರಾಯಿ ಪಾಲಿಥಿನ್ ಪ್ಯಾಕೇಟ್ ತಯಾರಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲ್ಲದಿದ್ದಲ್ಲಿ, ಸರ್ಕಾರ ಈ ರೀತಿ ಅನಧಿಕೃತವಾಗಿ ಸಾರಾಯಿ ಪ್ಯಾಕೇಟ್ ತಯಾರಿಸಿ ಮಾರಾಟ ಮಾಡುತ್ತಿರುವ ಅಂಗಡಿಗಳ ಪತ್ತೆ ಹಚ್ಚಿ ಅಂತಹವರ ಲೈಸನ್ಸ್‌ಗಳನ್ನು ರದ್ದುಪಡಿಸಿ ಅವರ ಮೇಲೆ ಕ್ರಮ ಕೈಗೊಳ್ಳುವುದೇ;

ಇ) ಬಂಗಾರಪೇಟೆ ತಾಲ್ಲೂಕಿನಲ್ಲಿ ನಡೆಯುತ್ತಿರುವ ಈ ಅಕ್ರಮ ವ್ಯವಹಾರವನ್ನು ಸರ್ಕಾರ ಕೂಡಲೇ ಪತ್ತೆ ಹಚ್ಚಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–